ಕೆರೆಗಳ ಬಗ್ಗೆ ಮಾಹಿತಿ ನೀಡುವುದು

884 (1135); ಶ್ರೀ ಭೀಮಾನಾಯ್ಕ ಎಸ್.

ಅ) ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಕೆಂಚಟನಹಳ್ಳಿ ಕೆರೆಯು ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟಿದೆಯೇ;

ಆ) ಹಾಗಿದ್ದಲ್ಲಿ, ಈ ಕೆರೆಯ ವಿಸ್ತೀರ್ಣ ಎಷ್ಟು; (ವಿವರಗಳನ್ನು ನೀಡುವುದು)

ಇ) ಈ ಕೆರೆಯಿಂದ ನೀರಾವರಿ ಸೌಲಭ್ಯವಾಗುವ ಅಚ್ಚುಕಟ್ಟು ಪ್ರದೇಶವೆಷ್ಟು;

ಈ) ಹಾಗಿದ್ದಲ್ಲಿ, ಈ ಕೆರೆಯ ಅಭಿವೃದ್ಧಿಗಾಗಿ ಕಳೆದ 3 ವರ್ಷಗಳಲ್ಲಿ ಸರ್ಕಾರ ವೆಚ್ಚ ಮಾಡಿರುವ ಮೊತ್ತವೆಷ್ಟು?

ಶ್ರೀ ಶಿವರಾಜ್ ಎಸ್. ತಂಗಡಗಿ (ಮಾನ್ಯ ಸಣ್ಣ ನೀರಾವರಿ ಸಚಿವರು)

ಅ) ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಕೆಂಚಟನಹಳ್ಳಿ ಕೆರೆಯು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಆದರೆ ಜಲಸಂವರ್ಧನೆ ಯೋಜನಾ ಸಂಘದ ವತಿಯಿಂದ ಸದರಿ ಕೆರೆಯನ್ನು ₹ 8.93 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದೆ.

ಆ) ಈ ಕೆರೆಯ ವಿಸ್ತೀರ್ಣ 30.05 ಹೆಕ್ಟೇರ್.

ಇ) ಈ ಕೆರೆಯಿಂದ ನೀರಾವರಿ ಪ್ರದೇಶವು 24.45 ಹೆಕ್ಟೇರ್.

ಈ) ಕಳೆದ 3 ವರ್ಷಗಳಲ್ಲಿ ಯಾವುದೇ ಮೊತ್ತ ವೆಚ್ಚ ಮಾಡಿರುವುದಿಲ್ಲ.

ಜಲಸಂವರ್ಧನೆ ಯೋಜನಾ ಸಂಘದ ಕರ್ನಾಟಕ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯ ಅಡಿಯಲ್ಲಿ ಸಮುದಾಯದ ಸಹಭಾಗಿತ್ವದಲ್ಲಿ ಕೆರೆ ಬಳಕೆದಾರರ ಸಂಘಗಳ ಮುಖಾಂತರ 2004 ರಿಂದ 2006 ರವರೆಗೆ ₹ 8.93 ಲಕ್ಷಗಳಲ್ಲಿ ಕೆರೆಯನ್ನು ಪುನಃಶ್ಚೇತನಗೊಳಿಸಲಾಗಿದೆ.